3. ಸದ್ಗುಣ ಸಮಾಜಕ್ಕೆ ಒಳಿತನ್ನು ಮಾಡುತ್ತದೆ.

4. ಪ್ರಾಮಾಣಿಕತೆ ತಕ್ಕ ಸಂಭಾವನೆಯನ್ನು ನೀಡುತ್ತದೆ.

**IX. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಮಾಲತಿ ಹತ್ತನೆಯ ತರಗತಿಯ ವಿದ್ಯಾರ್ಥಿನಿ. ಆಗಾಗ ಅವಳು ಶಾಲೆಯನ್ನು ತಪ್ಪಿಸಿ ಚಲನ ಚಿತ್ರ ನೋಡಲು ಹೋಗುತ್ತಾಳೆ. ಅವಳ ಗೆಳತಿಯವರು, "ನೀನು ಮಾಡುತ್ತಿರುವುದು ಸರಿಯಲ್ಲ" ಎಂದರು. ಅವಳು ಹೀಗೆಂದು ಉತ್ತರಿಸಿದಳು, "ನಾನು ಸ್ವಾತಂತ್ರ್ಯ ಪಕ್ಷಿಯಂತಿರಲು ಅಪೇಕ್ಷಿಸುತ್ತೇನೆ. ನನಗೆ ಇಷ್ಟ ಬಂದಂತೆ ಇರುವ ಸ್ವಾತಂತ್ರ್ಯ ನನಗಿದೆ".

   **a) i)** ಮಾಲತಿ ವರ್ತನೆ ಸರಿಯೆ?

   **ii)** ಏಕೆ?

   **b) i)** ಅವಳು ತನ್ನ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಿದಳೆ?

   **ii)** ಹೇಗೆ?

   **c) i)** ಶಾಲೆ ತಪ್ಪಿಸಿ ಚಲನ ಚಿತ್ರಕ್ಕೆ ಹೋದುದರ ಬಗ್ಗೆ ನಿನ್ನ ಅಬಿಪ್ರಾಯ ಏನು?

2. ಸುಬ್ಬನ ಕೆಲಸ ಶೌಚಾಲಯಗಳನ್ನು ತೊಳೆಯುವುದು. ತನ್ನ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಟ್ಟು ಸರಕಾರಿ ನೌಕರರಿಗೆ ಸೇರಿಸಬೇಕೆಂಬುದು ಅವನ ಅಪೇಕ್ಷೆ. ಅವನು ತನ್ನ ಯಜಮಾನನ ಬಳಿ ಹಣದ ಸಹಾಯವನ್ನು ಕೋರಿದ. ಯಜಮಾನ ಹೀಗೆಂದ: "ವಿದ್ಯಾಭ್ಯಾಸದ ನಂತರ ನಿನ್ನ ಮಗ ಏನು ಮಾಡಬಲ್ಲ. ಅವನು ನಿನ್ನಂತೆಯೇ ನಿನ್ನ ಉದ್ಯೋಗವನ್ನೇ ಮಾಡುತ್ತಾನೆ. ಆದುದರಿಂದ ಅವನನ್ನು ಶಾಲೆಗೆ ಕಳುಹಿಸಬೇಡ. ನಂತರ ನಾನು ಅವನ ಮದುವೆಗೆ ಬೇಕಾದ ಹಣವನ್ನು ಕೊಡುತ್ತೇನೆ". ತನ್ನ ಹಣೆಬರಹವನ್ನು ನಿಂದಿಸುತ್ತಾ ಸುಬ್ಬ ತನ್ನ ಕೆಲಸವನ್ನು ಮುಂದುವರಿಸುತ್ತಾ ಹೋದನು.

   **a) i)** ಈ ಘಟನೆಯ ಬಗ್ಗೆ ನಿನಗೆ ಏನೇನಿಸುತ್ತದೆ?

   **ii)** ಸುಬ್ಬನ ಯಜಮಾನನ ಮಾತು ಸರಿಯೇ?

   **b) i)** ಸುಬ್ಬನ ಸ್ವಾತಂತ್ರ್ಯ ಮೊಟಕಾಯಿತೇ?

   **ii)** ಹೇಗೆ?

   **c)** ಸುಬ್ಬನ ಯಜಮಾನನ ಸ್ಥಾನದಲ್ಲಿ ನೀನಿದಿದ್ದರೆ ಏನು ಹೇಳುತ್ತಿದ್ದೆ?



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 07–01–2017** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ________ ಎಲ್ಲ ಶಿಕ್ಷಣಕ್ಕಿಂತ ಪ್ರಮುಖವಾದುದು.

   (ದೈಹಿಕ ಶಿಕ್ಷಣ; ವೃತ್ತಿ ಶಿಕ್ಷಣ; ಸಾಮಾಜಿಕ ಶಿಕ್ಷಣ; ಮೌಲ್ಯ ಶಿಕ್ಷಣ)

2. ಮಾನವ ಜೀವಿಗಳಲ್ಲಿ ಒಟ್ಟು ________ ಗುಣಗಳಿವೆ.

   (ಮೂರು; ಎರಡು; ನಾಲ್ಕು; ಆರು)

3. ಸುಳ್ಳು ಹೇಳದಿರುವುದು ________ ಗುಣಕ್ಕೆ ಉದಾಹರಣೆಯಾಗಿದೆ.

   (ಸದ್ಗುಣ; ನಿರ್ಗುಣ; ದುರ್ಗುಣ; ಸುಗುಣ)

4. ನಮ್ಮ ಪ್ರತಿಭೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಅಡ್ಡಿ ಪಡಿಸುವ ಅಂಶ ________

   (ಸ್ವಾರ್ಥ; ನಿಸ್ವಾರ್ಥ; ಸತ್ಯ; ಅಹಿಂಸೆ)

5. ________ ತಕ್ಕ ಸಂಭಾವನೆಯನ್ನು ನೀಡುತ್ತದೆ.

   (ಕೆಲಸ; ಪ್ರಾಮಾಣಿಕತೆ; ಆರೋಗ್ಯ; ಸ್ವಚ್ಚತೆ)

6. ನೈಜ ಸಂತೋಷ ________ ಪರಿಯಂತದ ಕ್ರೀಯೆ.

   (ಕ್ಷಣಿಕ; ಜೀವಮಾನ; ದೀರ್ಘ; ಒಂದು ವರ್ಷದ)

7. ಭಗವಂತನು ________ ಗೆ ಬಹಳ ಬೇಗ ಒಲಿಯುವನು.

   (ಶ್ರೀಮಂತಿಕೆ; ದುರಾಸೆ; ಆಂತರಿಕ ಶುದ್ದತೆ; ಬಡತನಕ್ಕೆ)

8. ________ ಗುಣವನ್ನು ವಿದ್ಯಾರ್ಥಿ ಜೀವನದಿಂದಲೇ ರೂಡಿಸಿಕೊಳ್ಳಬೇಕು.

   (ಸಮಯ ಪರಿಪಾಲನೆ; ಸಮಯ ಹರಣ; ಸಮಯ ನಷ್ಟ; ಹಿಂಸೆ)

9. ಪ್ರತಿಯೊಬ್ಬರಲ್ಲೂ ಅನೇಕ ಹುದುಗಿದ ________ ಗಳಿವೆ.

   (ಆಸೆ; ಕನಸು; ಪ್ರತಿಭೆ; ಪ್ರೀತಿ)

10. ವಿಧೇಯ ಸೇವಕರ ಬಗ್ಗೆ ಯಜಮಾನರು ________ ಪಟ್ಟರು.

(ಸಂತೋಷ; ದುಃಖ; ಆತೃಪ್ತಿ; ತೃಪ್ತಿ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 5x1=5**

1. ಇತರರಿಗೆ ಒಳಿತನ್ನು ಮಾಡಲು ನನ್ನನ್ನು ಪ್ರೇರೆಪಿಸುವುದು ________
2. ನಮಗೆ ಸಹಾಯ ಮಾಡಿದವರಿಗೆ ಪ್ರತಿಯಾಗಿ ________ ಸಲ್ಲಿಸಬೇಕು.
3. ಅವಕಾಶಗಳನ್ನು ಬಳಸಿಕೊಳ್ಳಲು ಬಹು ಮುಖ್ಯ ತೊಡಕು ________
4. ಒಳ್ಳೆಯ ಭಾವನೆಗಳನ್ನು ________ ಭಾವನೆಗಳೆಂದು ಕರೆಯುತ್ತಾರೆ.
5. ________ ಕೊಟ್ಟಷ್ಟು ನಮ್ಮಲ್ಲಿ ಅದಿಕವಾಗುತ್ತದೆ.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಮೌಲ್ಯ | – | ಸೂಕ್ಷ್ಮ ಭಾವನೆ |
| 2. ಅನುಕಂಪ | – | ದೇವರಿಂದ ಪ್ರೀತಿಸಲ್ಪಡುತ್ತಾನೆ |
| 3. ಹೊಟ್ಟೆಕಿಚ್ಚು | – | ಸಾಮರ್ಥ್ಯಕ್ಕೆ ಅನ್ವಯಿಸುವಂಥದ್ದು |
| 4. ಸ್ವಾತಂತ್ರ್ಯದ ಆಯ್ಕೆ | – | ಬೆಲೆ, ಕಿಮ್ಮತ್ತು |
| 5. ಪ್ರಾಮಾಣಿಕ ವ್ಯಕ್ತಿ | – | ದುರ್ಗುಣ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಅಪ್ರಾಮಾಣಿಕ ವ್ಯಕ್ತಿ ಬಂಗಾರದ ಕೊಡಲಿಯನ್ನು ತನ್ನದೆಂದು ಹೇಳಿದುದು.
2. ಸ್ವಾತಂತ್ರ್ಯ ಪ್ರೀತಿ, ಕಾಳಜಿ ಮತ್ತು ತ್ಯಾಗವನ್ನು ಒಳಗೊಂಡಿದೆ.
3. ರಸ್ತೆಯಲ್ಲಿ ಕಸವನ್ನು ಹಾಕುವುದು ಒಳ್ಳೆಯ ಗುಣ.
4. ನಮ್ಮಲ್ಲಿರುವುದರಲ್ಲೇ ತೃಪ್ತರಾಗಿ ಜೀವಿಸುವುದು ಪ್ರಾಮಾಣಿಕತೆ ಆಗಿದೆ.
5. ಬಿಥೊವನ್ ಕಿವುಡರಾಗಿದ್ದರೂ ಸಹ ಅಪೂರ್ವ ಸಂಗೀತಗಾರರಾಗಿದ್ದರು.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಲಿಲ್ಲಿಯಲ್ಲಿ ಇರುವ ಒಂದು ಸಮಸ್ಯೆ ಯಾವುದು?
2. ನಿನ್ನಲ್ಲಿರುವ ಒಂದು ಪ್ರತಿಭೆಯನ್ನು ಗುರುತಿಸಿ ಬರೆ?
3. ಒಂದು ಮಗುವಿಗೆ ಕಲ್ಲು ತಾಗಿದಾಗ ಉಳಿದ ಹೆಂಗಸರು ಏನು ಮಾಡಿದರು?
4. ಆರೋಗ್ಯ ಪ್ರಜ್ಞೆ ಎಂದರೇನು?



5. ಇತರರ ಯಶಸ್ಸನ್ನು ಪ್ರೋತ್ಸಾಹಿಸುವ ಗುಣವನ್ನು ಏನೆನ್ನುವರು?

**VI. ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಅವಕಾಶಗಳನ್ನು ಕಳೆದುಕೊಂಡಾಗ ನಿನಗೆ ಏನಾಗುತ್ತದೆ?
2. ನಿರ್ಮಲತೆಯನ್ನು ಕಾಪಾಡಲು ನೀನು ಯಾವ ಕ್ರಮಗಳನ್ನು ಕೈಗೊಳ್ಳುವೆ?
3. ನಮ್ಮ ಪ್ರತಿಭೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ತೊಡಕಾಗಿರುವ ಅಂಶಗಳನ್ನು ಹೆಸರಿಸಿ?
4. ಸ್ವಾತಂತ್ರ್ಯದ ಸಕಾರಾತ್ಮಕ ಪರಿಣಾಮಗಳೇನು?
5. ರಿಚರ್ಡ್ ಪಾರ್ಟಿಯಲ್ಲಿ ಹೇಗೆ ವರ್ತಿಸಿದರು?
6. ದೇವತೆ ನಮಗೆ ಯಾವ ನೀತಿಯನ್ನು ಕಲಿಸಲು ಅಪೇಕ್ಷಿಸುತ್ತಾಳೆ?
7. ಅರ್ಥಭರಿತ ಸ್ವಾತಂತ್ರ್ಯ ಎಂದರೇನು?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ಮಾನವ ಜೀವಿಗಳ ಸ್ವಭಾವವೇನು?
2. ಮೌಲ್ಯ ಶಿಕ್ಷಣದ ಉದ್ದೇಶಗಳನ್ನು ಬರೆಯಿರಿ.
3. ಬೀದಿ ನಾಯಿ ಸ್ವಾತಂತ್ರ್ಯದ ಬಗ್ಗೆ ಸಾಕುನಾಯಿಗೆ ಏನೆಂದು ಹೇಳಿತು?
4. ನಿನಗೆ ತಿಳಿದಿರುವ ಮೌಲ್ಯಗಳನ್ನು ಬರೆದು ಅವುಗಳನ್ನು ವಿಭಾಗಿಸು.
5. ಮಾನವ ಪ್ರೀತಿಗೆ ವಿರುದ್ಧವಾದ ಐದು ಭಾವನೆಗಳನ್ನು ಬರೆಯಿರಿ.
6. ಮಣಿ ರತ್ನ ತನ್ನ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಿದನೇ? ಹೇಗೆ ವಿವರಿಸಿರಿ.
7. ಸಂತೋಷದಿಂದಿರಲು ಜಾನ್ ಪಾವೆಲ್ ಸೂಚಿಸಿರುವುದೇನು?
8. ನೀನು ಮೌಲ್ಯ ಶಿಕ್ಷಣ ತರಗತಿಗಳನ್ನು ಮೆಚ್ಚುತ್ತೀಯಾ? ಹೇಗೆ? ಏಕೆ?

**VIII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ನೀನು ನಿನ್ನ ಜೀವನದಲ್ಲಿ ಎದುರಿಸಿದ ಅತ್ಯುತ್ತಮ ವ್ಯಕ್ತಿ.
2. ಸ್ವಾತಂತ್ರ್ಯವಿಲ್ಲದೇ ಪ್ರಗತಿ ಇಲ್ಲ